

5185

# Swatantra Party

DISTRICT CONFERENCE, COORG.

*Office:*
Haradur Estate,
Suntikoppa P. O. (Coorg).
16—10—1959.

Dear friend,

A District Conference of the Swatantra Party will be held on 6th December 1959 in the *Town Hall, Mercara*, under the Presidentship of **Sri V. P. Menon.**

**Sri J. M. Imam, M. P.**, inaugurates the conference.

You are cordially invited to attend the conference with friends and sympathisers.

*Professor N. G. Ranga, M. P., Chairman of the Party is attending the Conference.*

## PROGRAMME

10 A. M. to 1 P. M.

1. Prayer.
2. Welcome Address by Sri B. S. Kushalappa, Ex-Speaker.
3. Inaugural Address by Sri J. M. Imam, M. P.
4. Presidential Address by Sri V. P. Menon, Joint Secretary, Swatantra Party.
5. Speech by Sri K. B. Jinaraja Hegde.

3 to 5 P. M.

1. Election of organisers of the Swatantra Party in the legislature constituencies.
2. Resolutions.
3. Thanks-giving.

**C. P. Appanna,**
Vice-President.

**G. M. Manjanathaya,**
Treasurer & Secretary.

**P. Sadananda Pai,**
Joint Secretary.

**B. S. Kushalappa,**
Reception Committee President.

**K. H. Sreenivasan,**
Vice-President.
State Swatantra Party.

# ಸ್ವತಂತ್ರ ಪಕ್ಷದ

## ಕೊಡಗು ಜಿಲ್ಲಾ ಪರಿಷತ್ತು

ಆಫೀಸು ಹರದೂರು ಕೋಟೆ,
ಸುಂಟಿಕೊಪ್ಪ ಪೋಸ್ಟು,
16—10—1959.

ಪ್ರಿಯರೇ,

ಸ್ವತಂತ್ರ ಪಕ್ಷದ ಕೊಡಗಿನ ಜಿಲ್ಲಾ ಪರಿಷತ್ತು 6-12-1959ನೇ
ಆದಿತ್ಯವಾರ ಮಡಿಕೇರಿಯಲ್ಲಿರುವ ಪುರಭವನದಲ್ಲಿ
ಶ್ರೀ ವಿ. ಪಿ. ಮೇನನರವರ ಅಧ್ಯಕ್ಷತೆಯಲ್ಲಿ ನೆರವೇರುವುದು.

ಶ್ರೀ ಜೆ. ಯಂ. ಇಮಾಮ್, M.P. ಯವರು ಉದ್ಘಾಟಿಸುವರು.
ನೀವೂ ನಿಮ್ಮ ಸ್ನೇಹಿತರೂ ಸಹಾನುಭೂತಿಯುಳ್ಳವರೂ
ಭಾಗವಹಿಸಬೇಕಾಗಿ ಅಪೇಕ್ಷಿಸುತ್ತೇವೆ.

ಆಚಾರ್ಯ ಯನ್. ಜಿ. ರಂಗ, M.P., ಸ್ವತಂತ್ರ ಪಕ್ಷದ
ಚೆಯರ್‌ಮೇನ್‌ರವರು ಬರುವರು.

# ಕಾರ್ಯಕ್ರಮ

**ಬೆಳಿಗ್ಗೆ 10ರಿಂದ 1ರ ವರೇಗೆ—**

1. ಪ್ರಾರ್ಥನೆ.
2. ಸ್ವಾಗತ ಭಾಷಣ ಶ್ರೀ ಬಿ. ಯಸ್. ಕುಶಾಲಪ್ಪನವರ:—ಮಾಜಿ ವಿಧಾನ ಸಭಾ ಅಧ್ಯಕ್ಷರು.
3. ಉದ್ಘಾಟನ ಭಾಷಣ ಶ್ರೀ ಜೆ. ಯಂ. ಇಮಾಮ್‌ರಿಂದ:
4. ಅಧ್ಯಕ್ಷರ ಭಾಷಣ—ಶ್ರೀ ವಿ. ಪಿ. ಮೆನನ್‌ರವರಿಂದ—ಸ್ವತಂತ್ರ ಪಕ್ಷದ ಜತೆಕಾರ್ಯದರ್ಶಿ.
5. ಭಾಷಣ—ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರಿಂದ-ಸ್ವತಂತ್ರ ಪಕ್ಷದ ಜತೆಕಾರ್ಯದರ್ಶಿ.

**ಸಾಯಂಕಾಲ 3ರಿಂದ 5ರ ವರೇಗೆ—**

1. ಎಸೆಂಬ್ಲಿ ಕಾರ್ಯಕ್ಷೇತ್ರ ಪ್ರಕಾರ ಪಕ್ಷದ ವ್ಯವಸ್ಥಾಪಕರ ಚುನಾವಣೆ.
2. ಠರಾವುಗಳು.
3. ವಂದನಾರ್ಪಣೆ.

**ಸಿ. ಪಿ. ಅಪ್ಪಣ್ಣ,**
ಉಪಾಧ್ಯಕ್ಷ.

**ಬಿ. ಎಸ್. ಕುಶಾಲಪ್ಪ,**
ಸ್ವಾಗತ ಸಮಿತಿ ಅಧ್ಯಕ್ಷ.

**ಜೆ. ಯಂ. ಮಂಜುನಾಥಯ್ಯ,**
ಕಾರ್ಯದರ್ಶಿ ಮತ್ತು ಖಜಾನ್ಚಿ

**ಕೆ. ಯಚ್. ಶ್ರೀನಿವಾಸನ್,**
ಮೈಸೂರು ಸ್ವತಂತ್ರ ಪಕ್ಷದ ಉಪಾಧ್ಯಕ್ಷರು.

**ಪಿ. ಸದಾನಂದ ಶೈ,**
ಜತೆಕಾರ್ಯದರ್ಶಿ.

# List of Reception Committee Members for the Inauguration of Swatantra Party in Coorg.

Messrs:

A. S Machiya, Suntikoppa.
C. M. Thimmaya, Mercara.
P. A. Nanjappa, Nakoor, Suntikoppa.
B. S. Kushalappa, Modur, Mercara.
K. M. Thimmaya, Bettagere.
D. M. Changappa, Andagove, Suntikoppa.
M. J. Rodrigues, Peelibetta, Ammathi.
D. Siddanna, Somwarpet.
Lt. Col. D. C. Basappa, Madapur.
Y. A. Annaya, Suntikoppa.
G. K. S. Bhat, Somwarpet.
C. Krishnan, Kedukal, Suntikoppa.
C. P. Kushalappa, Ponnampet.
K. S. Eswaran, Kibbetta, Somwarpet.
D. N. Chennaraj, Somwarpet.
Thomas D'Souza, Mercara.
K. D. Muddaya, Suntikoppa.
S. R. Vasudev, Fraserpet.

Messrs:
K. M. Muthanna, Madenad, Mercara.
K. M. Cariappa, Lakunda, Estate, Kutta.
Kadle Ganapathy, Aigoor.
M. M. Somanna, Kajoor.
M. S. Lingappa. Aigoor.
K. G. Muthanna, Gowda, Yedavare, Aigoor.
S. S. Appaiah, Kirgandoor, Somwarpet.
C. P. Appanna, Chettoli, Estate, Chethalli.
G. M. Manjanathaya, Suntikoppa.
B. A. Poovaiya, Kolagundi Estate, Pollibetta.
B. T. Siddappa, Bolloor, Fraserpet.
N. K. Mandanna. Mercara.
M. B. Madappa, Mercara.
H. Abdul Rahman, Merchant, Mahadevapet, Mercara.
Devashetty, Mahadevapet, Mercara.
Viswanath Kamath, Popular Restaurant, Mercara.
A. S. Iyappa, Sidapur.
K. Mayakutti, Sidapur.
C. K. Ponnappa, Retired Parpathigar, Mercara.
J. Puttaswamy, Kodmangalur, Kudige.
M. M. Puttaya, Kargunda.
C. A. Nanjappa, Cama Estate, Mercara.
Yajaman Thimmappa, Hebbale.

Messrs:
Cheppudira Ponnappa. Mayamudi.
K. A. Bopaya, Kakkabe.
H. J. Kalyanappa, Hebbale.
M. B. Cariappa, Swarnagiri, Sidapur.
Mohammed Ghouse, Mercara.
Abu Mohammed, Merchant, Mercara.
N. C. Thimmaya, Ammathi.
Ravi Poonja, Mercara.
M. S. Subraya, Kudmangalur, Kudige.
I. Subbaya, Hathoor.
C. V. Srinivasa Rao, Mercara.
G. N. Thimmappaya, Modur, Mercara.
K. A. Iyappa, Craigmore, Pollibetta.
Haji Bahuddin Saheb, Mercara.
K. P. Nanappa, Ponnampet.
M. M. Appachu, Ammathi.
K. Venkata Giri, Advocate, Mercara.
Raj Kumar R. Y. Ghorpade, Attur-Nullore, Suntikoppa.
H. T. Muthanna, Areyoor village, Somwarpet.
K. B. Ponnappa, Chethalli.
K. C. Chittyappa, Chethalli.
M. P. Awla, Timber Merchant, Chethalli.

Messrs:
K. Kuttihasan, Chethalli.
K. Mayakutty, Sidapur.
Theyathkandy Kadar, Sidapur.
P. I. Chermana, Sidapur.
C. M. Muthappa, Sidapur.
C. W. Medappa, Sidapur.
C. M. Biddappa, Byrambada, Estate, Ammathi-Ontiangadi.
Krishna Kutty, C/o C. M. Muthappa, Sidapur.
A. M. Subbiah, Kayakari Village, Gonicoppal.
Kuppandra M. Ganapathy, Suntikoppa.
K. A. Appachu, "Valley Fair", Mercara.
G. M. Gopalkrishna, Kanbile, Suntikoppa.
G. M. Mohan, Beligery, Aigoor P. O.
B. N. Iyappa, Planter, Dechoor, Mercara.
Brig. Ponnappa, Sidapur.
M. C. Shanthamallappa, Mercara.
K. D. Somaya, Suntikoppa.
C. S. Ponnappa, Konankatta, Mayamudi P. O.
P. C. Belliappa, Mercara.
M. Chandrashekhar Pai, Suntikoppa.
M. G. Vishwanath Rai, Suntikoppa.
K. P. Nanappa, Ponnampet.

Messrs:
Rao Bahadur K. G. Belliappa, Mercara.
S. Basappa, Pannia, Suntikoppa.
K. M. Appachu, Planter, Bettagere.
A. M. Devaiah, Mercara.
P. Sadananda Pai, Mangalore Stores, Mercara.
M. M. Uthaya, Cardamom Planter, Kargunda.
C. V. Srinivasa Rao, Mercara.
C. K. Appachu, Alathmad, Suntikoppa.
K. S. Muthanna, Mercara.
M. K. Muthanna.
K. A. Belliappa, Napoklu.
D. Basappa.
D. Shivappa.
Mrs. Manjanathaya
Mrs. S. Basappa
Mrs. C. P. Appanna

---

All good wishes to the brave men of Coorg who will undertake a great responsibility on 6th Dec. 1959.

C. RAJAGOPALACHAR.

**ರಾಜಾಜಿಯವರ ಸಂದೇಶ**

ತಾ. 6—12—1959ರಲ್ಲಿ ದೊಡ್ಡ ಜವಾಬು ಹೊರುವ ಕೊಡಗಿನ ವೀರಯೋಧರಿಗೆ ಶುಭಾಶಯಗಳು.

---

# ಸ್ವಾವಲಂಬನ ಮತ್ತು ಸ್ವಾತಂತ್ರ್ಯ

ಶ್ರೀ ರಾಜಗೋಪಾಲಾಚಾರ್ಯರು "ಸ್ವರಾಜ್ಯ" ಪತ್ರಿಕೆಯಲ್ಲಿ ಬರೆದ ಲೇಖನದ ಅನುವಾದ:

ಕಾಂಗ್ರೆಸ್ಸು ತನ್ನ ಮೂಲ ಸ್ವರೂಪವನ್ನು ಕಾಯ್ದುಕೊಂಡು, ಸಾಮ್ಯವಾದಿಗಳು ರಾಜಕೀಯ ರಂಗದಲ್ಲಿ ತಲೆ ಎತ್ತದಂತೆ ಪ್ರಯತ್ನಿಸಿದರೆ, ನಾವು ಕಾಂಗ್ರೆಸ್ಸನ್ನು ಬಾಯಿತುಂಬ ಅಭಿನಂದಿಸುತ್ತೇವೆ. ಆದರೆ, ಸಾಮ್ಯವಾದಿಗಳ ರೀತಿ ನೀತಿಗಳನ್ನೇ ಅನುಸರಿಸುತ್ತ, ಅವರ ಗರಡೀ ಮನೆಯಲ್ಲಿಯೇ ಅವರೊಂದಿಗೆ ಸೆಣಸ ಹೊರಟಂದು ಕಾಂಗ್ರೆಸ್ಸು ತನ್ನ ವರ್ಚಸ್ಸನ್ನು ಕಳೆದುಕೊಂಡಿತು. ಜನರ ಪ್ರತಿನಿಧಿ ತಾನೆಂಬ ಕಾಂಗ್ರೆಸ್ಸಿನ ಜಂಭದಲ್ಲಿಂದು ಅರ್ಥವಿಲ್ಲದಾಗಿದೆ.

ಕಾಂಗ್ರೆಸ್ಸಿನ ಸಮಾಜವಾದವಿಂದು ಮುಸುಕು ತೆರೆದು ಮುಖ ತೋರಿಸಹತ್ತಿದೆ. ಆರಂಭದಲ್ಲಿಯೇ ಅವರ ಸಮಾಜವಾದ (ಸೋಶಿಯಲಿಸಂ) ಮೊದಲ ತುತ್ತಿನಲ್ಲಿಯೇ ನೊಣಬಂದಂತೆನಿಸಿದೆ. ಭಾರತೀಯ ಜನತೆಗಿಂದು ಶತ್ರುರಾಷ್ಟ್ರದ ಸೆರೆಯಲ್ಲಿದ್ದಂತೆ ಭಾಸವಾಗುತ್ತಿದೆ. ಅವರೀ ಭಾವನೆಯಲ್ಲಿ ತಪ್ಪಿದೆಯೆಂದೂ ಹೇಳಲಿಕ್ಕಾಗದು. **'ಜನರು ದಿಗಿಲುಗೊಂಡಿದ್ದಾರೆ; ಪರಿಪರಿಯ ಪೀಡೆಗಳಿಂದ ಪರಿತಪ್ತರಾಗಿದ್ದಾರೆ; ಅವರಲ್ಲಿ ಭರವಸೆ ಅಥವಾ ಸುರಕ್ಷಿತೆಗಳು ಇಲ್ಲವೆಂದೆನಿಸಿದೆ. ಇಂದಿನ ಸಾವು ತಪ್ಪಿದರೆ ಸಾಕೆಂದು ಅವರಿಗನಿಸಹತ್ತಿದೆ.** ಎತ್ತ ನೋಡಿದತ್ತ ಅಧಿಕಾರದಲ್ಲಿದ್ದವರನ್ನು ಕಂಡು, ಭಯಭೀತರಾದವರು

ಕಂಡುಬರುತ್ತಾರೆ. ತಮಗೆ ಸರಿಕಂಡ ರೀತಿಯಲ್ಲಿ ನಡೆದರೆ, ನುಡಿದರೆ ನಮಗೇನಾಗುವದೊ! ನಮ್ಮ ವೃತ್ತಿ ವ್ಯವಸಾಯಗಳ ಗತಿ ಏನಾಗುವದೊ! ಎಂಬ ಅನಿಶ್ಚಿತ ಪರಿಸ್ಥಿತಿ ಅವರ ಮುಖದಲ್ಲಿ ಮೂಡಿದ್ದು ಕಂಡುಬರುತ್ತದೆ. 'ಸ್ವರಾಜ್ಯ'ವೆಂಬುದು, ಈ ಬಗೆಯ ಸಾರ್ವತ್ರಿಕ ಭಯ ಭೀತಿಗಳಲ್ಲಿ ಪರಿಣಿತವಾದುದು ಶೋಚನೀಯ ಸಂಗತಿಯಾಗಿದೆ.

ಆಳುವ ಪಕ್ಷ ಕೆಲವೊಂದು ಆಯ್ದ ಅಭಿವೃದ್ಧಿ ಕೇಂದ್ರಗಳಲ್ಲಿ ಮುಕ್ತ ಹಸ್ತದಿಂದ ಹಲವು ಪ್ರಸಂಗಗಳಲ್ಲಿ ಮೂರ್ಖತನದಿಂದ ಹಣ ಸೂರೆ ಮಾಡುವದನ್ನು ಕಂಡು, ವೃತ್ತಪತ್ರಿಕೆಗಳನ್ನೋದುವವರು ಮತ್ತು ಮತದಾರರು ಆನಂದ ತುಂದಿಲರಾಗುವ ಸಂಭವವಿದೆ. ಹೀಗೆ ಮಾಡುವದೇನೂ ಕಠಿಣವಲ್ಲ; ಯಾಕೆಂದರೆ, ಆಳುವ ಪಕ್ಷ ಸೂರೆ ಮಾಡುವ ಸಂಪತ್ತೂ ದೇಶದ ಕೋಶದಿಂದ ಹಗುರಿನಲ್ಲಿ ಸಿಕ್ಕುತ್ತದೆ. ಹೀಗೆ ಹಣ ಸೂರೆಯಾದ ಪ್ರದೇಶದ ಜನರು—ಇದು ಪ್ರಾದೇಶಿಕ ಕಾಂಗ್ರೆಸ್ ಶ್ರೇಷ್ಠಿಗಳ ಪುಣ್ಯವೆಂದೂ, ಕಾಂಗ್ರೆಸ್ ಪಕ್ಷದ ರಾಜನೀತಿಯ ವಿಶಿಷ್ಟ ಫಲವೆಂದು ಭ್ರಮಿಸುವರು. ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಇಂತಿಷ್ಟು ಸಾವಿರ ಕೋಟಿ ರೂಪಾಯಿಗಳು ವಿನಿಯೋಗವಾಗಲಿವೆಯೆಂಬ ಪ್ರಕಟಣೆಯನ್ನೋದಿ, ಮತದಾರರು ಆನಂದೋನ್ಮತ್ತರಾಗುವರು. ಆದರೆ, ಈ ನಿಯೋಜಿತ ವಿನಿಯೋಗವೆಂದರೆ, ನಿಯೋಜಿತ ಕಂದಾಯದ ಉತ್ಪನ್ನವೆಂದು ಅರ್ಥವಾಗುತ್ತದೆ ಅರ್ಥಾತ್ ಈಗಿರುವ ಕರ ತೆರಿಗೆಗಳನ್ನಲ್ಲದೆ, ಹೆಚ್ಚಿನ ಕರ ತೆರಿಗೆಗಳನ್ನು ಎತ್ತಬೇಕಾಗುತ್ತದೆ. ಇಷ್ಟೇ ಅಲ್ಲ; ದೇಶ ವಿದೇಶಗಳಿಂದ ತಂದ ಅಪಾರವ್ವ

ಸಾಲದ ಹೊರೆಯೂ ಇದರಲ್ಲಿ ಕೂಡುವದು. ಈ ಸಾಲವನ್ನು ಬಡ್ಡಿಯೊಂದಿಗೆ ತಿರುಗಿ ಕೊಡಬೇಕಾಗುವದೆಂಬುದು ನಿರ್ವಿವಾದ. ಇದರರ್ಥ ಮತ್ತೆ ಹೆಚ್ಚಿನ ಕರ ತೆರಿಗೆಗಳನ್ನು ಹೊರಬೇಕೆಂದಾಗುತ್ತದೆ. ಇದು ಎಲ್ಲರಿಗೂ ತಿಳಿಯುವ ವಿಷಯ. ಪ್ರತಿಯೊಂದು ಭವ್ಯ ಯೋಜನೆಗೆ ಎರಡು ಮುಖಗಳಿರುತ್ತವೆ. ಕರ ತೆರಿಗೆಗಳ ಮುಖವನ್ನು ಜನತೆ ಲಕ್ಷ್ಯಗೊಟ್ಟು ಅಭ್ಯಾಸಮಾಡಬೇಕಾಗುವದು. ಇನ್ನೊಂದು ಮುಖವನ್ನು ಯೋಜನಾ ಆಯೋಗವು ನೋಡಿಕೊಳ್ಳುವದು. ಈ ಅಂಕೆ ಸಂಖ್ಯೆಗಳಲ್ಲಿ (ನುಸಿಯಂತೆ) ನುಗ್ಗುವ ರಾಜ್ಯಭಾರ (ಆಡಳಿತೆ) ದೊಳಗಿನ ಲೋಪದೋಷಗಳು, ಅಪವ್ಯಯ, ವ್ಯರ್ಥವ್ಯಯಗಳು ಇವೇ ಮೊದಲಾದವುಗಳ ಪ್ರಮಾಣವೆಷ್ಟೆಂಬುದನ್ನು ಬೇರೆಯವರು ಅಭ್ಯಾಸ ಮಾಡಬೇಕು.

ಆಚಾರ್ಯ ರಂಗಾ ಅವರು ಉದ್ಘೋಷಿಸಿರುವ (ಸ್ವಾವಲಂಬನ) **Self-employment** ಮಂತ್ರಕ್ಕೆ ಸರಿ ಸಮಾನವಾದ ಭಾರತೀಯ ಶಬ್ದವೆಂದರೆ "ಸ್ವತಂತ್ರ" ಎಂಬುದಾಗಿದೆ. **Self-employment** ಎಂಬ ಆಂಗ್ಲ ಶಬ್ದವು 'ಸ್ವತಂತ್ರ' ಎಂಬುದರ ಸಂಪೂರ್ಣ ಅರ್ಥವನ್ನು ಸೂಚಿಸುತ್ತದೆ. ಸ್ವತಂತ್ರ ಜೀವನವೆಂದರೆ, ಅಜ್ಞ ಅಧಿಕಾರಿಗಳ ಹಸ್ತಕ್ಷೇಪವಿಲ್ಲದ, ವ್ಯಕ್ತಿಸ್ವಾವಲಂಬನ ಜೀವನವೆಂದು ಹೇಳಬಹುದು.

ಜರ್ಮನಿಯ ಆರ್ಥಿಕ ಪುನರುತ್ಥಾನವನ್ನು ಕುರಿತು ಬರೆದ ತನ್ನ ಪುಸ್ತಕದಲ್ಲಿ ಲುಡ್ವಿಗ್ ಎರ್ಹಾರ್ಡ್ ಹೀಗೆ ಹೇಳುತ್ತಾರೆ—ಸ್ವಚ್ಛಂದ ಅರ್ಥ ನೀತಿಯಿಂದ ಸಾಧಿಸಿದ ನಿಸ್ಸಂದಿಗ್ಧ ಯಶಸ್ಸನ್ನು ನೋಡಿ, ದೇಶದ

ಅಭ್ಯುದಯಕ್ಕಾಗಿ ಸಾಧ್ಯವಿದ್ದ ಶಕ್ತಿ ವ್ಯಕ್ತಿಗಳನ್ನು ಉಪಯೋಗಿಸಿಕೊಳ್ಳುವದು, ಎಂತಹ ವಿವೇಕದ ಹಾದಿಯೆಂಬುದು ಸಿದ್ಧವಾಗುತ್ತದೆ. ಅದನ್ನು ಬಿಟ್ಟು, ದೇಶದ ಸಂಪತ್ತನ್ನು ಹಂಚಿಹಾಕುವಲ್ಲಿ ಗುದ್ದ್ಯಾಡುವದು, ಎಂತಹ ಅವಿವೇಕದ ರಾಷ್ಟ್ರ ವಿಘಾತಕವಾದ ಹಾದಿಯೆಂಬುದೂ ಸ್ಪಷ್ಟವಾಗುತ್ತದೆ. ದೊಡ್ಡ ರೊಟ್ಟಿಯಿಂದ ದೊಡ್ಡದೊಂದು ತುಣುಕು ಮುರಿದು ಕೊಡುವದೇನು ಕಠಿಣವಲ್ಲ. ಆದರೆ, ಚಿಕ್ಕದಾದ ರೊಟ್ಟಿಯನ್ನು ಹರಿದು ಹಂಚಿಕೊಳ್ಳುವುದರಲ್ಲಿ ತಲೆಕಡಿಸಿಕೊಳ್ಳುವದು ಮೂರ್ಖತನವಾಗುವದು.

ಸ್ವಾವಲಂಬನಕ್ಕೆ (ವ್ಯಕ್ತಿ ಸ್ವಾತಂತ್ರ್ಯಕ್ಕೆ) ಇನ್ನೂ ಒಂದು ಮುಖವಿದೆ; ಆ ಮುಖವು ಹಾಸ್ಯಾಸ್ಪದವೂ ಆಗಿದೆ. ಇಂದು ನಮ್ಮ ದೇಶವು ದಿನದ ೨೪ ತಾಸೂ ರಾಜ್ಯಕಾರಣದಲ್ಲಿ ದಗ್ಗುದುಳಿಯುವ ರಾಜಕಾರಣಿಗಳ ಪಾಲಾಗಿದೆ. ಅವರು ಜನಜೀವನದಲ್ಲಿ ಕಚೇರಿ ಕಟ್ಟೆಗಳಲ್ಲಿ ಎಡೆಯಾಡುತ್ತಲಿದ್ದಾರೆ. ಇದರಿಂದಾಗಿ ರಾಜ್ಯಭಾರದಲ್ಲಿ ಸಡಿಲುತನ ಶೈಥಿಲ್ಯಗಳು ಹೆಚ್ಚುತ್ತಿವೆ, ಇಂತಹ ರಾಜಕಾರಣಿಗಳ ಬದಲು, ಸ್ವಾವಲಂಬಿಯಾದ ರಾಜಕಾರಣಿಗಳು ವಿಧಾನ ಸಭೆ, ಲೋಕ ಸಭೆಗಳಲ್ಲಿ ಬರಬೇಕೆಂದು ಜನರು ಆಶಿಸುತ್ತಾರೆ. ತಮ್ಮ ಬುದ್ಧಿಶಕ್ತಿ ಶಿಕ್ಷಣಗಳ ಬಲದಿಂದ ಮಾಡಬಹುದಾದ ಯಾವ ವೃತ್ತಿ ವ್ಯವಸಾಯಗಳಿಗಿಂತಲೂ ರಾಜಕಾರಣವೇ ಹೆಚ್ಚು ಲಾಭದಾಯಕ ವ್ಯವಹಾರವೆಂದು ತಿಳಿದ ಜನರುಂಟು. ಕಾಂಗ್ರೆಸ್ಸಿನ ಅಂತರ್ಗತ ಪ್ರಜಾಪ್ರಭುತ್ವವಾದೀ ರಂಗ (ಡೆಮಾಕ್ರ್ಯಾಟಿಕ್ ಫ್ರಂಟ್)ದ ಪರವಾಗಿ ಪಿ. ಸಾದೀಖರು ಇಸ.

೧೯೫೦ರಲ್ಲಿ ಒಪ್ಪಿಸಿದ ವರದಿಯಲ್ಲಿ ಈ ಆರೋಪವನ್ನು ಪುಷ್ಟೀಕರಿಸುವ ಉದಾಹರಣೆಗಳು ಹೇರಳವಾಗಿ ಸಿಕ್ಕುತ್ತವೆ. ನೇಮ, ನಿಯಂತ್ರಣಗಳೆಂದರೆ ಈ ರಾಜಕಾರಣಿಗಳಿಗೆ ಒಂದು ಸುಗ್ಗಿ ಎನ್ನಿಸುವದು. ತಮ್ಮ ಹಸ್ತಕರಿಗೆ ಗುತ್ತಿಗೆ ದೊರಕಿಸಿಕೊಡಲು ಅನುಕೂಲ ಸಂದರ್ಭವೆನಿಸುವದು. ಆಚಾರ್ಯ ರಂಗಾ ಅವರ 'ಸ್ವಾವಲಂಬೀ ಕೃಷಿಕರು' ಎಂಬ ಮಂತ್ರವನ್ನು 'ಸ್ವಾವಲಂಬೀ ರಾಜಕಾರಣಿಗಳು' ಬೇಕೆಂಬಲ್ಲಿಯೂ ಅನ್ವಯಿಸಿಕೊಳ್ಳಬಹುದಾಗಿದೆ. ರಾಜಕಾರಣಿಗಳು ಸ್ವಾವಲಂಬಿಗಳಾದರೆ (ಅಂದರೆ ರಾಜಕಾರಣವನ್ನೇ ಹೊಟ್ಟೆಯ ಉದ್ಯೋಗವನ್ನಾಗಿ ಮಾಡಿಕೊಳ್ಳದಿದ್ದರೆ) ಜನರ ಅರ್ಧಕ್ಕರ್ಧ ಕಷ್ಟಕಾರ್ಪಣ್ಯಗಳು ಕಡಿಮೆಯಾಗುವವು. ಹಲಕೆಲವು ಕಾಂಗ್ರೆಸ್ ಶ್ರೇಷ್ಠಿಗಳ ವೈಯಕ್ತಿಕ ಜೀವನವನ್ನು ಕಣ್ಣಿಟ್ಟು ನಿರೀಕ್ಷಿಸಿದ ಮಾತ್ರದಿಂದ ಕಾಂಗ್ರೆಸ್ಸಿಗರ ಬಗೆಗೆ ಜನರ ಅಭಿಪ್ರಾಯದಲ್ಲಿ ವ್ಯತ್ಯಾಸವೇಕಾಯಿತೆಂಬುದಕ್ಕೆ ಸಾಕಷ್ಟು ಕಾರಣಗಳು ಸಿಕ್ಕುವವು. ಅದರೊಂದಿಗೆ, ತಮ್ಮ ವೈಯಕ್ತಿಕ ಜೀವನದ ವೆಚ್ಚವನ್ನು ಬಾಯಗ್ಗಿಡಿಸಲು, ಸರಕಾರದ ನಿಯಂತ್ರಣ ಲಾಯ್ಸೆನ್ಸುಗಳ ಮೇಲೆ, ಸರಕಾರೀ ಅಧಿಕಾರಿಗಳ ಮೇಲಿರುವ ತಮ್ಮ ವರ್ಚಸ್ಸಿನ ಮೇಲೆ ಅವಲಂಬಿಸಿರದ ಸ್ವಾವಲಂಬಿ ರಾಜಕಾರಣಿಗಳ ಅಗತ್ಯವೆಷ್ಟಿದೆಯೆಂಬುದನ್ನು ಸ್ಪಷ್ಟಪಡಿಸುವದು.

S. P. Works, Ltd., Mangalore—1